# <u>ಕರ್ನಾಟಕ ವಿಧಾನ ಪರಿಷತ್ತು</u>

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1200**

**ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು (ವಿಧಾನ ಸಭಾ ಕ್ಷೇತ್ರ)**

**ಉತ್ತರಿಸುವ ದಿನಾಂಕ : 17.12.2025**

**ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

<table>
<tr><th>ಕ್ರಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಹಾಲು ನೀಡುವ ದನಗಳು ಮತ್ತು ಮೇಯಿಸುವ ಪ್ರಾಣಿಗಳಿಗೆ ಮೇವು ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸರ್ಕಾರ ರೈತರಿಗೆ ಹೇಗೆ ಬೆಂಬಲ ನೀಡುತ್ತಿದೆ; ಹಾಗೂ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೇವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಇಲಾಖೆ ಕೈಗೊಂಡಿದೆ;</td><td>ಹಾಲು ನೀಡುವ ದನಗಳು ಮತ್ತು ಮೇಯಿಸುವ ಪ್ರಾಣಿಗಳಿಗೆ ರಾಷ್ಟ್ರೀಯ ಜಾನುವಾರು ಮಿಷನ್ (NLM), ರಾಜ್ಯವಲಯದ ಮೇವು ಮತ್ತು ಆಹಾರ ಅಭಿವೃದ್ಧಿ ಉಪಯೋಜನೆ ಹಾಗೂ SDRF ಅನುದಾನದಡಿ ಮೇವು ಉತ್ಪಾದನೆಯನ್ನು ಉತ್ತೇಜಿಸಲು ರೈತರಿಗೆ ಉಚಿತವಾಗಿ ಮೇವಿನ ಬೀಜಗಳ ಮಿನಿಕಿಟ್‌ಗಳನ್ನು ವಿತರಿಸಲಾಗಿರುತ್ತದೆ.<br><br>ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳ ಮೂಲಕ ರಾಜ್ಯಾದ್ಯಂತ ಒಟ್ಟು 16,77,755 ಮೇವಿನ ಬೀಜಗಳ ಮಿನಿಕಿಟ್‌ಗಳನ್ನು ಉಚಿತವಾಗಿ ವಿತರಿಸಿ ಉತ್ಕೃಷ್ಟ ಮೇವು ಬೆಳೆಯಲು ಉತ್ತೇಜಿಸಿ ಮೇವಿನ ಅಭಿವೃದ್ಧಿ ಕೈಗೊಳ್ಳಲಾಗಿದೆ.
<table>
<tr><th>ವರ್ಷ</th><th>ವಿತರಿಸಿದ ಮೇವಿನ ಬೀಜದ ಮಿನಿಕಿಟ್‌ಗಳ ಸಂಖ್ಯೆ</th></tr>
<tr><td>2023-24</td><td>13,56,786</td></tr>
<tr><td>2024-25</td><td>3,06,819</td></tr>
<tr><td>2025-26</td><td>14,150</td></tr>
<tr><td>ಒಟ್ಟು</td><td>16,77,755</td></tr>
</table>
</td></tr>
<tr><td>ಆ)</td><td>ಪಶು ಸಂಗೋಪನಾ ಪದ್ಧತಿಗಳನ್ನು ಸುಧಾರಿಸಲು ರೈತರಿಗೆ ಮತ್ತು ಪಶುವೈದ್ಯಕೀಯ ಸಿಬ್ಬಂದಿಗಳಿಗೆ ಯಾವ ತರಬೇತಿ ವಿಸ್ತಾರಣಾ ಹಾಗೂ ತಂತ್ರಜ್ಞಾನ ಚಟುವಟಿಕೆಗಳನ್ನು ಇಲಾಖೆ ವತಿಯಿಂದ ಒದಗಿಸಲಾಗಿದೆ.</td><td>ಇಲಾಖಾ ವತಿಯಿಂದ ರೈತರಿಗೆ ಮತ್ತು ಪಶುವೈದ್ಯಕೀಯ ಸಿಬ್ಬಂದಿಗಳಿಗೆ ಕೆಳಕಂಡಂತೆ ತರಬೇತಿ ಹಾಗೂ ವಿಸ್ತರಣಾ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.
<table>
<tr><th>ತರಬೇತಿ</th><th>ವಿಸ್ತರಣಾ ಚಟುವಟಿಕೆಗಳು</th></tr>
<tr><td>ರೈತರಿಗೆ:<br>1. ಆಧುನಿಕ ಹೈನುಗಾರಿಕೆ ತರಬೇತಿ.<br>2. ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ.<br>3. ಕೋಳಿ ಸಾಕಾಣಿಕೆ ತರಬೇತಿ.<br>4. ಹಂದಿ ಸಾಕಾಣಿಕೆ ತರಬೇತಿ.<br>ಸಿಬ್ಬಂದಿಗಳಿಗೆ:<br>1. ಪುನಶ್ಚೇನ ತರಬೇತಿ.<br>2. ತಾಂತ್ರಿಕ ವಿಷಯಗಳ ಕುರಿತು ತರಬೇತಿ.<br>3. ವಿವಿಧ ಯೋಜನೆಗಳ ಕುರಿತು ತರಬೇತಿ.<br>4. ಆಡಳಿತಾತ್ಮಕ ತರಬೇತಿ.</td><td>1. ಮಿಶ್ರ ತಳಿ ಜಾನುವಾರು/ ಕರುಗಳ ಪ್ರದರ್ಶನ.<br>2. ಪ್ರಾಣಿ ಜನ್ಯ ರೋಗಗಳ ಜಾಗೃತಿ ಶಿಬಿರ.<br>3. ರೈತರಿಗೆ ಅಧ್ಯಯನ ಪ್ರವಾಸ.<br>4. ಜಾನುವಾರು ಆರೋಗ್ಯ ಶಿಬಿರ.<br>5. ಹಾಲು ಕರೆಯುವ ಸ್ಪರ್ದೆ.<br>6. ತಾಂತ್ರಿಕ ವಿಚಾರ ಸಂಕಿರಣ.</td></tr>
</table>
</td></tr>
</table>

| | | |
|---|---|---|
| ಇ) | ವಿಮಾ ಯೋಜನೆಗಳು ಮತ್ತು ಸಬ್ಸಿಡಿಗಳಂತಹ ಯೋಜನೆಗಳಿಂದ ಪಶುಸಂಗೋಪಿತ ರೈತರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಕ್ರಮಗಳನ್ನು ನೀಡುವಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ. | ವಿಮಾ ಯೋಜನೆಗಳು ಮತ್ತು ಸಬ್ಸಿಸಿಡಿಗಳಂತಹ ಯೋಜನೆಗಳಿಂದ ಪಶುಸಂಗೋಪಿತ ರೈತರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಕ್ರಮಗಳನ್ನು ನೀಡುವ ಉದ್ದೇಶದಿಂದ ಜಾರಿಗೊಳಿಸಿದ ವಿಮಾ ಮತ್ತು ಸಹಾಯಧನ ಯೋಜನೆಯನ್ನು **ಅನುಬಂಧ** ದಲ್ಲಿ ನೀಡಿದೆ. |
| ಈ) | ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಪಶುವೈದ್ಯಕೀಯ ಆಸ್ಪತ್ರೆಗಳು, ಔಷದಾಲಯಗಳು ಆಧುನಿಕ ಕಸಾಯಿಖಾನೆಗಳಂತಹ ಮೂಲಸೌಕರ್ಯ ಅಭಿವೃದ್ಧಿ ಸ್ಥಿತಿ ಏನು; ಕುರಿ ಸಾಕಾಣಿಕೆ, ಉಣ್ಣೆ ಉತ್ಪಾದನೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕಾಣಿಕೆ ಮುಂತಾದ ಸಂಬಂಧಿತ ಚಟುವಟಿಕೆಗಳನ್ನು ಉತ್ತೇಜಿಸಲು ಯಾವ ಯೋಜನೆಗಳು ಅಸ್ತಿತ್ವದಲ್ಲಿವೆ ಮತ್ತು ಅವುಗಳ ಪರಿಣಾಮವೇನು? (ಮಾಹಿತಿ ನೀಡುವುದು) | ಜಿಲ್ಲಾ ಮಟ್ಟದಲ್ಲಿ ಸೂಪರ್ ಸ್ಪೆಷಾಲಿಟಿ,ಸ್ಪೆಷಾಲಿಟಿ, ಪಾಲಿಕ್ಲಿನಿಕ್ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ, ಸದರಿ ಸಂಸ್ಥೆಗಳು ನೂತನ ಕಟ್ಟಡವನ್ನು ಹೊಂದಿದ್ದು, ಮತ್ತು ಅತ್ಯಾಧುನಿಕ ಉಪಕರಣಗಳನ್ನು ಹೊಂದಿದ್ದು, ಜಾನುವಾರುಗಳಿಗೆ ಉತ್ತಮ ಚಿಕಿತ್ಸಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br><br>ತಾಲ್ಲೂಕು ಮಟ್ಟದ ಪಶು ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ಬರುವ ಜಾನುವಾರುಗಳಿಗೆ ರಕ್ತ ಪರೀಕ್ಷೆ ಹಾಗೂ ಅಲ್ಟ್ರಾ ಸೌಂಡ್‌ನಂತಹ ಸಲಕರಣೆಗಳನ್ನು ಬಳಸಿ ಉತ್ತಮ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಪಶುಚಿಕಿತ್ಸಾ ಕೇಂದ್ರದ ಕಟ್ಟಡಗಳು ಸುಸ್ಥಿತಿಯಲ್ಲಿದೆ.<br><br>2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ ಆಯ್ದ ತಾಲ್ಲೂಕಿನಲ್ಲಿ 20 ತಾಲ್ಲೂಕು ಪಶುಆಸ್ಪತ್ರೆಗಳನ್ನು ಪಾಲಿಕ್ಲಿನಿಕ್ ಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.<br><br>ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಚೀಲನಹಳ್ಳಿ ಗ್ರಾಮದ ಸರ್ವೆ ನಂ:14 ರ 20 ಎಕರೆ ಜಮೀನಿನಲ್ಲಿ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಿಮಿತದ ವತಿಯಿಂದ ಕುರಿ/ಮೇಕೆಗಳ ಆಧುನಿಕ ವಧಾಗಾರವನ್ನು ಪಿಪಿಪಿ ಮಾದರಿಯಲ್ಲಿ ಸ್ಥಾಪಿಸಲಾಗಿದ್ದು, ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ಶೀಘ್ರದಲ್ಲಿಯೇ ಕಾರ್ಯಾರಂಭಗೊಳ್ಳಲಿದೆ.<br><br>ಕುರಿ ಸಾಕಾಣಿಕೆ ಉಣ್ಣೆ ಉತ್ಪಾದನೆ, ಕೋಳಿ ಸಾಕಾಣಿಕೆ ಮತ್ತು ಹಂದಿ ಸಾಕಾಣಿಕೆ ಮುಂತಾದ ಸಂಬಂಧಿತ ಚಟುವಟಿಕೆ ಉತ್ತೇಜಿಸಲು **ಅನುಬಂಧ-1** ರಲ್ಲಿರುವ ಯೋಜನೆಗಳು ಅಸ್ತಿತ್ವದಲ್ಲಿರುತ್ತದೆ. ಈ ಎಲ್ಲಾ ಯೋಜನೆಗಳಿಂದ ರೈತರ ಆರ್ಥಿಕ ಮಟ್ಟವು ಸುಧಾರಿಸಿರುತ್ತದೆ. |

**ಪಸಂಮೀ 282 ಸಲೆವಿ 2025**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

## ಅನುಬಂಧ-1

### 1. ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ(NLM) ಜಾನುವಾರು ವಿಮಾ ಕಾರ್ಯಕ್ರಮ

ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ ಜಾನುವಾರು ವಿಮಾ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದೆ, ರೈತರು ರಾಸುಗಳನ್ನು ಆಕಸ್ಮಿಕ ಮರಣ ಇಲ್ಲವೆ ಇತರೆ ಕಾರಣಗಳಿಂದ ಕಳೆದು ಕೊಂಡಲ್ಲಿ,ಆರ್ಥಿಕ ನಷ್ಟ ಭರಿಸುವ ಉದ್ದೇಶದಿಂದ ಜಾನುವಾರುಗಳಿಗೆ ಜಾನುವಾರು ವಿಮಾ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಕೇಂದ್ರದ ಪಾಲು ಶೇಕಡ 60 ಹಾಗೂ ರಾಜ್ಯದ ಪಾಲು ಶೇಕಡ 40 ಸೇರಿರುತ್ತದೆ.

**ಜಾನುವಾರು ಮೌಲ್ಯದ ಆಧಾರದ ಮೇಲೆ ವಿಮಾ ಕಂತನ್ನು 3.78%, 7.56% ಮತ್ತು 11% ಗಳನ್ನು ಕ್ರಮವಾಗಿ 1 ವರ್ಷಕ್ಕೆ, 2 ವರ್ಷಕ್ಕೆ ಮತ್ತು 3 ವರ್ಷಕ್ಕೆ ನಿಗದಿಪಡಿಸಲಾಗುತ್ತದೆ. ನಿಗದಿಪಡಿಸಿದ ವಿಮಾ ಕಂತಿನ ಮೇಲೆ ಶೇ.85% ರಷ್ಟನ್ನು ಸರ್ಕಾರದಿಂದ ಸಹಾಯಧನವನ್ನು ನೀಡಲಾಗುತ್ತದೆ. ಮತ್ತು ಶೇ.15% ಅನ್ನು ಫಲಾನುಭವಿಯ ವಂತಿಗೆಯಾಗಿ ಭರಿಸಬೇಕಾಗುತ್ತದೆ.**

### 2. ರಾಷ್ಟ್ರೀಯ ಜಾನುವಾರು ಮಿಷನ್ (ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ)

ಭಾರತ ಸರ್ಕಾರದ ಪಶು ಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆಯ ವತಿಯಿಂದ 2021-22 ರಿಂದ 2025-26 ನೇ ಸಾಲಿನವರೆಗೆ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

**ಯೋಜನೆಯ ಉದ್ದೇಶ:**

ಉದ್ಯೋಗ ಸೃಷ್ಟಿ, ಉದ್ಯಮಶೀಲತೆ ಅಭಿವೃದ್ಧಿ, ಜಾನುವಾರು ಉತ್ಪಾದಕತೆಯ ಹೆಚ್ಚಳ ಮತ್ತು ಮಾಂಸ, ಮೇಕೆ ಹಾಲು, ಮೊಟ್ಟೆ ಮತ್ತು ಉಣ್ಣೆಯ ಉತ್ಪಾದನೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿದೆ.

ಗ್ರಾಮೀಣ ಯುವಕರನ್ನು ಈ ಕ್ಷೇತ್ರದಲ್ಲಿ ಸ್ವಯಂ ಸಕ್ರಿಯಗೊಳಿಸಲು ಖಾಸಗಿ ಹೂಡಿಕೆಯನ್ನು ಆಹ್ವಾನಿಸುವುದು.

**ಅರ್ಹ ಸಂಸ್ಥೆಗಳು**: ವೈಯಕ್ತಿಕ, ರೈತ ಉತ್ಪಾದಕ ಸಂಘಟನೆಗಳು, ಸ್ವ ಸಹಾಯ ಗುಂಪು, ಜಂಟಿ ಹೊಣೆಗಾರಿಕೆ ಗುಂಪು, ವಿಭಾಗ 8 ಕಂಪನಿಗಳು.

- ಗ್ರಾಮೀಣ ಕೋಳಿ ಉದ್ಯಮಶೀಲತೆ ಮಾದರಿ ಲೋ ಇನ್ಪುಟ್ ಟೆಕ್ನಾಲಜಿಯ 1000 ಮಾತೃ ಕೋಳಿ ಫಾರ್ಮ್ ಸ್ಥಾಪನೆ, ಮರಿಗಳ ಉತ್ಪಾದನೆಗಾಗಿ ಹ್ಯಾಚರಿ ಮತ್ತು ಮರಿಗಳ ಸಾಕಣಿಕೆಗಾಗಿ ಪೋಷಕ ಘಟಕಗಳ ಸ್ಥಾಪನೆ. ಒಟ್ಟು ಗರಿಷ್ಠ ಯೋಜನಾ ವೆಚ್ಚ- ರೂ 50.00 ಲಕ್ಷ, ಸಹಾಯಧನ- ರೂ 25.00 ಲಕ್ಷ
- ಮೇಕೆ /ಕುರಿಮರಿಗಳ ಉತ್ಪಾದನೆಗೆ ಈ ಕೆಳಕಂಡಂತೆ ಕುರಿ ಮತ್ತು ಮೇಕೆ ಸಾಕಣೆ ಕೇಂದ್ರಗಳ ಸ್ಥಾಪನೆ:

  500 ಹೆಣ್ಣು ಮತ್ತು 25 ಗಂಡು- (ಕುರಿ/ಮೇಕೆ).
  ಗರಿಷ್ಠ ಯೋಜನಾ ವೆಚ್ಚ- ರೂ 100.00 ಲಕ್ಷ - ಸಹಾಯಧನ- ರೂ 50.00 ಲಕ್ಷ

  400 ಹೆಣ್ಣು ಮತ್ತು 20 ಗಂಡು- (ಕುರಿ/ಮೇಕೆ).
  ಗರಿಷ್ಠ ಯೋಜನಾ ವೆಚ್ಚ- ರೂ 80.00 ಲಕ್ಷ - ಸಹಾಯಧನ- ರೂ 40.00 ಲಕ್ಷ

  300 ಹೆಣ್ಣು ಮತ್ತು 15 ಗಂಡು- (ಕುರಿ/ಮೇಕೆ).
  ಗರಿಷ್ಠ ಯೋಜನಾ ವೆಚ್ಚ- ರೂ 60.00 ಲಕ್ಷ - ಸಹಾಯಧನ- ರೂ 30.00 ಲಕ್ಷ

  200 ಹೆಣ್ಣು ಮತ್ತು 10 ಗಂಡು- (ಕುರಿ/ಮೇಕೆ).
  ಗರಿಷ್ಠ ಯೋಜನಾ ವೆಚ್ಚ- ರೂ 40.00 ಲಕ್ಷ - ಸಹಾಯಧನ- ರೂ 20.00 ಲಕ್ಷ

100 ಹೆಣ್ಣು ಮತ್ತು 05 ಗಂಡು- (ಕುರಿ/ಮೇಕೆ).
ಗರಿಷ್ಠ ಯೋಜನಾ ವೆಚ್ಚ- ರೂ 20.00 ಲಕ್ಷ - ಸಹಾಯಧನ- ರೂ 10.00 ಲಕ್ಷ

- ಹಂದಿ ಮರಿಗಳ ಉತ್ಪಾದನೆ ಮತ್ತು ಹಂದಿಮರಿಗಳ ಕೊಬ್ಬಿಸುವಿಕೆ:
  100 ಹೆಣ್ಣು ಮತ್ತು 10 ಗಂಡು ಹಂದಿಗಳ ಸಂವರ್ಧನಾ ಕ್ಷೇತ್ರ ಸ್ಥಾಪನೆ.
  ಗರಿಷ್ಠ ಯೋಜನಾ ವೆಚ್ಚ- ರೂ 60.00 ಲಕ್ಷ. ಸಹಾಯಧನ- ರೂ 30.00 ಲಕ್ಷ
  50 ಹೆಣ್ಣು ಮತ್ತು 5 ಗಂಡು ಹಂದಿಗಳ ಸಂವರ್ಧನಾ ಕ್ಷೇತ್ರ ಸ್ಥಾಪನೆ.
  ಗರಿಷ್ಠ ಯೋಜನಾ ವೆಚ್ಚ- ರೂ 30.00 ಲಕ್ಷ. ಸಹಾಯಧನ- ರೂ 15.00 ಲಕ್ಷ

- ಪಶು ಆಹಾರ ಮತ್ತು ಮೇವು ಉದ್ಯಮಶೀಲತೆ ಪ್ರೋತ್ಸಾಹಿಸಲು ಸೈಲೇಜ್ ತಯಾರಿಕೆ ಘಟಕ, ಮೇವು ಬ್ಲಾಕ್ ತಯಾರಿಕೆ ಘಟಕ ಮತ್ತು ಟಿಎಂಆರ್ ಪ್ಲಾಂಟ್ ಸ್ಥಾಪನೆ ಒಟ್ಟು
  ಗರಿಷ್ಠ ಯೋಜನಾ ವೆಚ್ಚ- ರೂ 100.00 ಲಕ್ಷ - ಸಹಾಯಧನ- ರೂ 50.00 ಲಕ್ಷ

www.nlm.udyamimitra.in portal ನಲ್ಲಿ online upload ಮಾಡಬಹುದಾಗಿರುತ್ತದೆ. ಸದರಿ ಯೋಜನೆಯನ್ನು ಹೊಸ ಅರ್ಜಿಗಳನ್ನು ಸಲ್ಲಿಸುವ ನಿಟ್ಟಿನಲ್ಲಿ ದಿನಾಂಕ: 15-07-2025 ರಿಂದ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿರುತ್ತದೆ.

3.ಪರಿಶಿಷ್ಟ ಜಾತಿ ಮತ್ತು ಪಂಗಡ ಸದಸ್ಯರುಗಳಿಗೆ 10+1 ಕುರಿ / ಮೇಕೆ ವಿತರಣೆ ಶೇ.90 ರಷ್ಟು ಸಹಾಯಧನದೊಂದಿಗೆ ವಿತರಿಸಲಾಗುವುದು.

4.ನಾಟಿ ಕೋಳಿ ಮರಿಗಳ ವಿತರಣೆ 5 ವಾರದ 20 ಕೋಳಿ ಮರಿಗಳನ್ನು ಪರಿಶಿಷ್ಟ ಜಾತಿ ಮತ್ತು ಪಂಗಡ ಸದಸ್ಯರುಗಳಿಗೆ ಉಚಿತವಾಗಿ ವಿತರಿಸಲಾಗುವುದು.

5. ಅಮೃತ ಸ್ವಾಭಿಮಾನಿ ಕುರಿಗಾಹಿ ಯೋಜನೆಯಡಿ ಘಟಕ ವೆಚ್ಚ ರೂ.1,75,000/-ಗಳಲ್ಲಿ ರಾಜ್ಯ ಸರ್ಕಾರದ ಸಹಾಯಧನ ರೂ.43,750/- NCDC ರವರಿಂದ ಸಾಲದ ರೂಪದಲ್ಲಿ ರೂ.87,500/- ಹಾಗೂ ಫಲಾನುಭವಿ ವಂತಿಕೆ ರೂ.43,750/- ಗಳ ವೆಚ್ಚದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

6. ವಿಮೆಗೆ ಒಳಪಡದ ಜಾನುವಾರುಗಳು ಆಕಸ್ಮಿಕ ಮರಣ ಹೊಂದಿದಲ್ಲಿ ಪ್ರಸ್ತುತ ರೂ.15,000/- ಗಳನ್ನು ಕಾಮಧೇನು ಆಪತ್ ನಿಧಿಯಿಂದ ಪರಿಹಾರವಾಗಿ ನೀಡಲಾಗುತ್ತಿದೆ.

7. ಅನುಗ್ರಹ ಕೊಡುಗೆ ಯೋಜನೆಯಡಿ ಕುರಿ/ಮೇಕೆಗಳು ಆಕಸ್ಮಿಕ ಮರಣ ಹೊಂದಿದಲ್ಲಿ ರೂ.7,500/- ಗಳನ್ನು ಪರಿಹಾರವಾಗಿ ನೀಡಲಾಗುತ್ತಿದೆ.

8. ಹಾಲು ಉತ್ಪಾದಕರಿಗೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆ ಒದಗಿಸಲು ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಸರಬುರಾಜು ಮಾಡಿದ ಪ್ರತಿ ಲೀಟರ್‌ಗೆ ರೂ.5/- ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

ನಿರ್ದೇಶಕರು